# ‘ಬಿಗ್ ಬಿ’ ಪುನರಾಗಮನ



**ಬಾ**ಲಿವುಡ್‌ನ ಸಿನಿಮಾಗಳು ಒಂದರ ಹಿಂದೆ ಒಂದರಂತೆ ತೋಪೆದ್ದರೂ, ಕಿರುತೆರೆಯಲ್ಲಿ ಬಾಲಿವುಡ್ ಸೂಪರ್‌ಸ್ಟಾರ್‌ಗಳ ಆಕರ್ಷಣೆ ಕಡಿಮೆಯಾಗಿಲ್ಲ. ‘ಇಂಡಿಯನ್ ಐಡಲ್’ನಲ್ಲಿ ಅಮೀರ್‌ಖಾನ್ ಒಮ್ಮೆ ಕಾಣಿಸಿಕೊಂಡವನು ಮತ್ತೆ ಬರುತ್ತೇನೆ ಎಂದು ಹೇಳಿ ಹೋಗಿದ್ದಾನೆ. ಈ ಮಧ್ಯೆ ಅಮಿತಾಭ್ ಬಚ್ಚನ್ ಮತ್ತೆ ಕಿರುತೆರೆಯಲ್ಲಿ ‘ಕೌನ್ ಬನೇಗಾ ಕರೋಡ್‌ಪತಿ’ಯಲ್ಲಿ ಕಾಣಿಸಿಕೊಂಡಿದ್ದಾನೆ.

ಕೆಬಿಸಿ ಎಂದೇ ಜನಪ್ರಿಯವಾದ ‘ಕೌನ್ ಬನೇಗಾ ಕರೋಡ್‌ಪತಿ’ ನಾಲ್ಕನೇ ಆವೃತ್ತಿಗೆ ಮತ್ತೆ ಅಮಿತಾಭ್ ಆತಿಥೇಯ. ಆರಂಭದಲ್ಲಿ ಸ್ಟಾರ್‌ಪ್ಲಸ್ ಚಾನೆಲ್‌ನಲ್ಲಿ ಅಮಿತಾಭ್ ಈ ಷೋ ಶುರು ಮಾಡಿದಾಗ ದೊಡ್ಡ ಕೋಲಾಹಲವೇ ಉಂಟಾಯಿತು. ಸ್ಟಾರ್‌ಪ್ಲಸ್‌ನ ಟಿಆರ್‌ಪಿ ರೇಟ್ ಅತ್ಯುನ್ನತ ಮಟ್ಟಕ್ಕೆ ಏರಿತು. ‘ಕಂಪ್ಯೂಟರ್ ಜೀ’ ಮತ್ತು ‘ಲಾಕ್ ಕಿಯಾ ಜಾಯೆ’ ಎಂಬ ಶಬ್ದಗಳು ದಿನ ಬೆಳಗಾಗುವುದರೊಳಗೆ ಮನೆಮಾತಾದವು.

ಆ ಬಳಿಕ ಶಾರೂಕ್ ಖಾನ್ ಆ ಷೋವನ್ನು ನಡೆಸಿದರೂ ಅದು ಅಷ್ಟೊಂದು ಜನಪ್ರಿಯವಾಗಲಿಲ್ಲ. ಹಾಗೆ ನೋಡಿದರೆ ಶಾರೂಕ್ ನಡೆಸಿದ ಇನ್ನೊಂದು ಟಿ.ವಿ ಷೋ ಕೂಡಾ ಎಷ್ಟೇ ಪ್ರಚಾರ ಇದ್ದರೂ ಗೆಲ್ಲಲಿಲ್ಲ. ಶಾರೂಕ್ ಷೋಗೆ ಹೋಲಿಸಿದರೆ ಸಲ್ಮಾನ್ ಖಾನ್‌ನ ‘ದಸ್ ಕಾ ಧಮ್’ ಎಷ್ಟೋ ವಾಸಿ. ಟಿಆರ್‌ಪಿ ಜನಪ್ರಿಯತೆಯಲ್ಲಿ ಅದೂ ಸಾಕಷ್ಟು ಮೇಲೇರಿತ್ತು.

ಈಗ ಕೆಬಿಸಿ-4 ಸೋನಿ ಟಿವಿ ಗೆ ಹೊಸ ಜನಪ್ರಿಯತೆ ತಂದುಕೊಡುವ ಸಾಧ್ಯತೆ ಇದೆ. ಜಾಹೀರಾತುಗಳಲ್ಲಿ ಬಿಡುವಿಲ್ಲದೆ ದುಡಿಯುತ್ತಿರುವ ಅಮಿತಾಭ್ ಬಚ್ಚನ್, ಈ ವರ್ಷದ ಕೊನೆಗೆ ದಕ್ಷಿಣ ಆಫ್ರಿಕಾದಲ್ಲಿ ನಡೆಯುವ ಟಿ-20 ಕ್ರಿಕೆಟ್ ಸೀರೀಸ್‌ಗೂ ಜಾಹೀರಾತು ಅಂಬಾಸಿಡರ್! ಆದರ ಜಾಹೀರಾತುಗಳು ಈಗಾಗಲೆ ಸಿದ್ಧವಾಗಿವೆ. ಈ ಮಧ್ಯೆ ಕರೋಡ್‌ಪತಿ ಷೋ ಸಾಕಷ್ಟು ನಿರೀಕ್ಷೆಗಳನ್ನು ಹುಟ್ಟುಹಾಕಿವೆ.

## ಪ್ರಿಯಾಂಕಾ ಖಾಸ್‌ಬಾತ್



‘**ಯಾ**ವ ನಟನ ಜತೆಗೂ ತಿರುಗಾಡುವಂತಿಲ್ಲ. ಈ ಮಾಧ್ಯಮದವರು ಹೆಸರು ಜೋಡಿಸಿ ಕಥೆ ಕಟ್ಟುತ್ತಾರೆ. ಒಂದು ಸಿನಿಮಾದಲ್ಲಿ ಒಟ್ಟಿಗೆ ಕೆಲಸ ಮಾಡುತ್ತೇವೆ ಅಂದ ಮೇಲೆ ಅದರ ಹೀರೊ ಜತೆಗೆ ಸ್ನೇಹದಿಂದ ಇರುವುದು ತಪ್ಪೆ? ಆ ಸ್ನೇಹಕ್ಕೆ ಬೇರೆ ಬೇರೆ ಅರ್ಥ ಏಕೆ ಕಲ್ಪಿಸಬೇಕು? ಸಿನಿಮಾ ಪ್ರಚಾರದ ಸಲುವಾಗಿ ನಾವೇ ಹೀಗೆ ಮಾಡಿಸುತ್ತೇವೆ ಎಂದು ನಮ್ಮ ಮೇಲೆಯೇ ಗೂಬೆ ಕೂರಿಸುತ್ತಾರೆ. ಇದ್ಯಾಕೋ ಅತಿಯಾಯ್ತಪ್ಪ..’ ಎಂದು ವಿಶ್ವಸುಂದರಿ ಪ್ರಿಯಾಂಕಾ ಛೋಪ್ರಾ ಮಾಧ್ಯಮಗಳ ಮೇಲೆ ಕಿಡಿ ಕಾರಿದ್ದಾಳೆ.

‘ನಾನು ನಟಿಸಿದ ಬಹುತೇಕ ಹೀರೋಗಳ ಜತೆ ಗಾಸಿಪ್ ಕಾಲಂನಲ್ಲಿ ನನ್ನ ಹೆಸರು ಕಾಣಿಸಿಕೊಂಡಿದೆ. ಇದನ್ನೆಲ್ಲ ಕ್ಯಾರೇ ಅನ್ನಬಾರದು ಅಂದುಕೊಂಡಿದ್ದೇನೆ. ಆದರೆ ಮನೆಯಲ್ಲಿ ಟೆನ್ಶನ್ ಆದಾಗ ಏನು ಮಾಡಬೇಕು?’ ಎನ್ನುವುದು ಆಕೆಯ ಪ್ರಶ್ನೆ.

‘ಸದ್ಯಕ್ಕೆ ನನಗೆ ಯಾರ ಜತೆಗೂ ಅಫೇರ್ ಇಲ್ಲ. ಇದ್ದರೆ ಬಹಿರಂಗವಾಗಿ ನಾನೇ ಎಲ್ಲರಿಗೂ ಹೇಳಿ ಕಳುಹಿಸುತ್ತೇನೆ’ ಎಂದು ಖಡಕ್ಕಾಗಿ ಪ್ರಿಯಾಂಕಾ ಹೇಳಿದ್ದಾಳೆ. ಅಂದ ಹಾಗೆ ಈಕೆ ಕಿಡಿ ಕಾರುತ್ತಿರುವುದು ಇದು ಹತ್ತನೇ ಸಲವಂತೆ!

■ ಬಿಂದು